

ಮರುದಿನ ರಾಜಸಭೆಯಲ್ಲಿ ನಿಗ್ರೋಧ ಧಮ್ಮ ಅಶೋಕರ ಪಕ್ಕದಲ್ಲೇ ಕುಳಿತುಕೊಂಡಿದ್ದ. ಅಶೋಕ ಮಹಾರಾಜರೇ ಒತ್ತಾಯ ಮಾಡಿ ಕುಳ್ಳಿರಿಸಿ ಕೊಂಡಿದ್ದರು. ಅಲ್ಲಿ ಆತ ಬುದ್ಧ ಹೇಳಿದ ಉದಾತ್ತ ಸತ್ಯಗಳನ್ನು ಹೇಳಿದ್ದ. ಅದನ್ನು ಕೇಳಿ ಅಲ್ಲಿರುವ ವಿದ್ವತ್ ಪ್ರಪಂಚ ಗಾಬರಿಯಾಯಿತು.

1) ದುಃಖದ ಸತ್ಯ 2) ದುಃಖಕ್ಕೆ ಕಾರಣವಾದ ಸತ್ಯ 3) ದುಃಖದ ಅಂತ್ಯ. ಇವುಗಳನ್ನು ಆ ಹುಡುಗ ಬೆಣ್ಣೆಯೊಳಗೆ ಕೂದಲನ್ನು ಬಿಡಿಸುವಂತೆ ಬಿಡಿಸುತ್ತಲೇ ಹೋದ.

ಈ ಸಂದರ್ಭದಲ್ಲಿಯೇ ಮೌರ್ಯ ದಂಡನಾಯಕ ಮಹಾವಿಸ್ಮಯ ಶುಂಗ ಒಳಬಂದ. ಒಳ ಬರುವ ಮುಂಚೆ ಆತ ಅತಿ ತುರ್ತು ನಿಬಂಧನಾ ಜಾಗಟೆಯನ್ನು ಬಡಿದು ಒಳಬಂದಿದ್ದ. ಕ್ಷಣಹೊತ್ತು ರಾಜ ನಿಗ್ರೋಧ ಧಮ್ಮನ ಅನುಮತಿ ಪಡೆದು ಅವನ ಜೊತೆ ಚರ್ಚೆಗೆ ಕುಳಿತರು. 'ಕಳಿಂಗದ ರಾಜ, ಅನಂತಪದ್ಮನಾಭ ನಮ್ಮ ಎರಡು ಸಾವಿರ ಸೈನ್ಯವನ್ನು ಮತ್ತು ಇಬ್ಬರು ಉಪ ದಂಡನಾಯಕರನ್ನು ಸೆರೆ ಹಿಡಿದಿದ್ದಾನೆ. ನಾನು ಹೇಗೋ ತಪ್ಪಿಸಿಕೊಂಡು ಬಂದಿದ್ದೇನೆ. ಏನು ಮಾಡುವುದು ನೀವೇ ಹೇಳಿ' ಎಂದಾಗ ಅಶೋಕರ ಮೈಯ್ಯಲ್ಲಿ ಮತ್ತೆ ಬಿಸಿರಕ್ತ ಸಂಚಾರವಾಯಿತು. ಅವರು ಮತ್ತೆ ಕ್ರುದ್ಧರಾದರು, ಆರ್ಭಟಿಸಿದರು; ತನ್ನ ನಾಲ್ಕು ಲಕ್ಷ ಸೈನ್ಯ ಕಳಿಂಗದ ಮೇಲೆ ಈಗಿಂದೀಗಲೇ ದಾಳಿ ಮಾಡುವ ಅಗತ್ಯವನ್ನು ಒತ್ತಿ ಹೇಳಿದರು. ಆಗ ಮತ್ತೆ ನಿಗ್ರೋಧ ಮಧ್ಯ ಪ್ರವೇಶಿಸಿ, 'ಇದು ಯುದ್ಧದ ಸಮಯವಲ್ಲ, ನಿಮಗೆ ಸೋಲಾಗಬಹುದು' ಎಂದು ಎಚ್ಚರಿಸಿದ. ಸೋಲಾಗಬಹುದು ಎಂದೊಡನೆಯೇ ಅಶೋಕನಿಗೆ ಕ್ಷಣ ಹಿಂಜರಿಕೆಯಾಯಿತು. ಗಾಬರಿಯಾದರು. ಈ ಹುಡುಗನ ಬಗ್ಗೆ ಕೊಂಚ ನಂಬಿಕೆ ಬೆಳೆಸಿಕೊಂಡಿದ್ದ ಅಶೋಕ ಯೋಚಿಸಹತ್ತಿದರು. ಮಹಾವಿಸ್ಮಯ ಶುಂಗ ಏನೋ ಹೇಳಲು ಬಂದ, ಆಗ ನಿಗ್ರೋಧನೇ ಹೇಳಿದ, 'ಮಹಾವಿಸ್ಮಯ ಶುಂಗರೇ, ಅನಂತಪದ್ಮನಾಭರು ಯುದ್ಧ ಬೇಡವೆಂದರೂ ನೀವು ಯಾಕೆ, ದಂಡೆತ್ತಿ ಹೋದಿರಿ? ಅವರಿಗಿಂತ ನಿಮಗೆ ಯುದ್ಧ ಬೇಕಾಗಿದೆ. ಶುಂಗ, ನೀನು ಯುದ್ಧ ಫಲಾಪೇಕ್ಷಿ ಆಗಿರುವಿ. ಅನಂತ ಪದ್ಮನಾಭನಿಗೆ ಬೇಕಾಗಿದ್ದು ಸ್ವಾತಂತ್ರ್ಯ, ಸ್ವತಂತ್ರವಾಗಿರಲು ಬಿಡಿ' ಎಂದ. 'ಅವರ ವಂಶದವರ ಜೊತೆ ಯುದ್ಧ ಮಾಡುತ್ತ ಚಂದ್ರಗುಪ್ತ ಮೌರ್ಯರು ಸೋತಿದ್ದಾರೆ ಮತ್ತು ನಮ್ಮ ತಾತ ಬಿಂಬಸಾರ ಮಹಾರಾಜರು ಸೋತಿದ್ದಾರೆ. ಈ ಯುದ್ಧ ಯಾರಿಗೂ ಒಳಿತನ್ನು ಮಾಡುವುದಿಲ್ಲ' ನನ್ನ ತಾತ ಎಂದು ನಿಗ್ರೋಧ ನಾಲಗೆ ಕಚ್ಚಿಕೊಂಡು ಮನದಲ್ಲಿ ಬುದ್ಧ ಗುರುವನ್ನು ಧ್ಯಾನಿಸಿದ. ಈಗ ಅಶೋಕ ಮಹಾರಾಜರಿಗೆ ಇವನು ಅಣ್ಣನ ಮಗ ಎಂಬುವುದು ಇನ್ನೂ ಖಾತ್ರಿಯಾತು. ಮಹಾವಿಸ್ಮಯ ಶುಂಗ, 'ಪ್ರಭುಗಳೇ ತಮ್ಮ ಆಜ್ಞೆಗಾಗಿ ಕಾಯುತ್ತಿದ್ದೇನೆ' ಎಂದು ಹೇಳಿದ; 'ನೀವು ಒಂದು ಲಕ್ಷ ಸೈನ್ಯ ತೆಗೆದು ಕೊಂಡು ಕಳಿಂಗ ತಲುಪಿರಿ, ಯುದ್ಧ ಬೇಡವೇ ಬೇಡ. ಸಂಧಾನ ಮಾರ್ಗದಿಂದ ನಮ್ಮ ಸೈನಿಕರನ್ನು ಹಾಗೂ ದಂಡನಾಯಕರನ್ನು ಬಿಡಿಸಿಕೊಂಡು ಬನ್ನಿ. ನನಗೆ ಈ ಹತ್ತು ದಿನಗಳ ಕಾಲ ನಿಗ್ರೋಧ ಧಮ್ಮರ, ಉಪದೇಶ ಬಿಟ್ಟು ಬೇರೇನೂ ಬೇಕಾಗಿಲ್ಲ. ಹಾಂ, ವಿಸ್ಮಯ ಶುಂಗರೇ, ಈ ಒಡಂಬಡಿಕೆಯ ಜವಾಬ್ದಾರಿ ಅಸಾಂಧಿ ಮಿತ್ರೆ ವಹಿಸಿಕೊಳ್ಳುವಳು. ಅವಳು ಸಹ ಕಳಿಂಗದತ್ತ ಪ್ರಯಾಣ ಬೆಳೆಸುತ್ತಾಳೆ. ಇನ್ನು ಒಂದು ವಾರ ನಿಗ್ರೋಧರ ಪ್ರವಚನವನ್ನು ಕೇಳಿ ಆಮೇಲೆ ತುರ್ತಾಗಿ ನಿಮ್ಮನ್ನು ತಲುಪುತ್ತೇವೆ. ರಕ್ತವಿಲ್ಲದ ಖಡ್ಗಕ್ಕೆ ಕೆಲಸವಿಲ್ಲದ ಯುದ್ಧ ಆಗಬೇಕು. ಅದು ಯುದ್ಧ ಅನ್ನುವ ಹಾಗಿಲ್ಲ. ಅದಕ್ಕೆ ಸಂಧಾನವೇ ಸೂಕ್ತವಾದ ಹೆಸರು. ನೀವು ಹೊರಡಿ' ಎಂದು ಅಜ್ಞಾಪಿಸಿ ಬೀಳ್ಕೊಟ್ಟರು.

ಅಸಾಂಧಿಮಿತ್ರೆ ಒಂದು ಲಕ್ಷ ಸೈನ್ಯದ ನೇತೃತ್ವ ವಹಿಸಿ ಹುರುಪಿನಿಂದಲೇ ರಥ ಹತ್ತಿ, ಕಳಿಂಗದತ್ತ ನಡೆದಳು. ಮಹಾವಿಸ್ಮಯ ಶುಂಗ ಸೇನಾಪಡೆಯ ದಂಡನಾಯಕನಾಗಿ ಮಹಾರಾಣಿಯ ಹಿಂದೆ